**ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 26-06-1969.**

(ओम शान्ति, बापदादा. अव्यक्त मुरली 26-06-1969)

***ತಮ್ಮ ಸ್ವರೂಪದಿಂದ ಶಿಕ್ಷಣ ಕೊಡುವುದೇ - ಶಿಕ್ಷಣ ಕೊಡುವ ಸ್ವರೂಪ***

(शिक्षा देने का स्वरुप – अपने स्वरुप से शिक्षा देना)

ತಂದೆ ಯಾರನ್ನು ನೋಡುತ್ತಿದ್ದಾರೆ? ಮಕ್ಕಳನ್ನು ನೋಡುತ್ತಿದ್ದಾರೆಯೇ? ಇಂದು ಮುರಳಿಯಲ್ಲಿ ಏನು ಕೇಳಿದಿರಿ. ತಾವೆಲ್ಲರೂ ಯಾರನ್ನು ನೆನಪು ಮಾಡುತ್ತೀರಿ? (ತಂದೆ, ಶಿಕ್ಷಕ, ಸದ್ಗುರು), ಬಾಪ್ ದಾದಾರವರೂ ಸಹ ಮಕ್ಕಳನ್ನಷ್ಟೇ ಅಲ್ಲ ಮೂರೂ ಸಂಬಂಧಗಳಿಂದ ಮೂರೂ ರೂಪಗಳಲ್ಲಿ ನೋಡುತ್ತಾರೆ. ಎಲ್ಲರೂ ಮಕ್ಕಳೇ ಆದರೆ ಶಿಕ್ಷಕನ ರೂಪದಲ್ಲಿ ಏನನ್ನು ನೋಡುತ್ತಾರೆ? ನಂಬರವಾರ್ ವಿದ್ಯಾರ್ಥಿಗಳನ್ನು ನೋಡುತ್ತಾರೆ ಮತ್ತು ಗುರುವಿನ ರೂಪದಲ್ಲಿ ಯಾರನ್ನು ನೋಡುತ್ತಾರೆ? ತಿಳಿದಿದೆಯೇ? ನಂಬರವಾರ್ ಅನುಸರಿಸುವವರನ್ನು. ಯಾರೆಲ್ಲ ಅನುಸರಿಸಿದ್ದಾರೆಯೋ ಹಾಗೂ ಇನ್ನೂ ಯಾರು ಅನುಸರಿಸಬೇಕಾಗಿದೆಯೋ ಇವರಿಬ್ಬರನ್ನೂ ನೋಡುತ್ತಾರೆ. ಯಾವ ಅನುಕರಣೆ ಮುಖ್ಯವಾದದ್ದು? ಗುರುವಿನ ರೂಪದಲ್ಲಿ ಯಾವ ಶಿಕ್ಷಣವನ್ನು ಕೊಡುತ್ತಾರೆಯೋ ಅದನ್ನು, ಅದರಲ್ಲಿಯೂ ಮುಖ್ಯವಾಗಿ ಯಾವುದನ್ನು ಅನುಸರಿಸಬೇಕು? (ನೆನಪಿನ ಯಾತ್ರೆ) ನೆನಪಿನ ಯಾತ್ರೆ ಒಂದು ಸಾಧನ ಆದರೆ ಅದನ್ನೂ ಸಹ ಏತಕ್ಕಾಗಿ ಮಾಡಿಸುತ್ತಾರೆ? ಬೇರೆಯವರ ಸದ್ಗತಿಯನ್ನು ಮಾಡಲು ಮೊದಲು ತಮಗೆ ತಾವೇ ಏನನ್ನು ಅನುಸರಿಸಬೇಕು? ನೆನಪಿನ ಯಾತ್ರೆಯನ್ನೂ ಏಕೆ ಕಲಿಸಲಾಗುತ್ತದೆ?

ಅಶರೀರಿ, ನಿರಾಕಾರಿ, ಅಲಿಪ್ತರಾಗುವುದನ್ನು ಗುರುವಿನ ರೂಪದಲ್ಲಿ ಮುಖ್ಯವಾಗಿ ಅನುಸರಿಸಬೇಕಾಗಿದೆ. ಆದ್ದರಿಂದಲೇ ಸಾಕಾರದಲ್ಲಿರುತ್ತಾ ನಿರಾಕಾರ ಮತ್ತು ಅಲಿಪ್ತ, ಆಶರೀರಿಯಾಗಿರಲು ನೆನಪಿನ ಯಾತ್ರೆಯನ್ನೂ ಮಾಡುತ್ತಾರೆ. ಆಶರೀರಿಯಾದಾಗ ಮಾತ್ರ ಗುರುವಿನ ಜೊತೆಗೆ ಹೋಗಲು ಸಾಧ್ಯ. ಮುಖ್ಯ ರೂಪದಲ್ಲಂತೂ ಇದನ್ನೇ ಅನುಸರಿಸುತ್ತಿರುವಿರಿ ಮತ್ತು ಅನುಸರಿಸಬೇಕು.

ಶಿಕ್ಷಕನ ರೂಪದಲ್ಲಿ ಪಾತ್ರ ನಡೆದಿದೆಯೋ ಅಥವಾ ಪೂರ್ಣವಾಯಿತೋ? (revise) .ಪುನರಾವರ್ತನೆಯ ಕೋರ್ಸ್ ಶಿಕ್ಷಕ ಮಾಡಿಸುತ್ತಿರುವರೋ ಅಥವಾ ನೀವೇ ಮಾಡುತ್ತಿರುವಿರೋ? (ಅವರ ಸಹಯೋಗವಿದೆ), ಕಲಿಸುವುದಿಲ್ಲ ಆದರೆ ಸಹಯೋಗವಿದೆ. ಪುನರಾವರ್ತನೆಯ ಕೋರ್ಸ್ ಗಾಗಿ ಶಾಲೆಯಿಂದ ರಜೆ ತಗೆದುಕೊಂಡು ಮನೆಯಲ್ಲಿ ಅಭ್ಯಾಸ (home Work) ಮಾಡುತ್ತಾರೆ ಆದರೆ ಆಗಲೂ ಶಿಕ್ಷಕನ ಜೊತೆಗೆ ಸಂಬಂಧವಿರುತ್ತದೆ, ಜೊತೆ ಇರುವುದಿಲ್ಲ. ಆದರೆ ಸಂಬಂಧವಿರುತ್ತದೆ. ಪುನರಾವರ್ತನೆಯ ಕೋರ್ಸ್‌ನಲ್ಲಿ ಶಿಕ್ಷಕರೂಂದಿಗೆ ಯಾವಾಗಲೂ ಸಂಬಂಧವಿರುತ್ತದೆ. ಜೊತೆಗಿರುವುದಿಲ್ಲ, ಈಗ ಶಿಕ್ಷಕ ದೂರದಿಂದಲೇ ಗಮನಿಸುತ್ತಾ ಇದ್ದಾರೆ. ಅಂತಿಮ ಪರೀಕ್ಷೆಯವರೆಗೂ ಎಲ್ಲಿಯಾದರೂ ಕಠಿಣವಾದದ್ದನ್ನು ಕೇಳಬಹುದು ಆದರೆ ಹೇಗೆ ಶಿಕ್ಷಣದ ಸಮಯದಲ್ಲಿ ಜೋತೆಗಿರುತ್ತಿದ್ದರೋ ಆ ರೀತಿ ಜೊತೆ ಇರುವುದಿಲ್ಲ, ಪುನರಾವರ್ತನೆಯ ಕೋರ್ಸ್ ನಲ್ಲಿಯಾರು ಎಷ್ಟು ಶಕ್ತಿಯಿಂದ, ಪರಿಶ್ರಮದಿಂದ, ಉತ್ಸಾಹ-ಉಲ್ಲಾಸಗಳಿಂದ ಕೋರ್ಸನ್ನು ಪೂರ್ಣ ಮಾಡುತ್ತಿರುವಿರೆಂದು ಈಗ ಮೇಲೆ ಕುಳಿತುಕೊಂಡು ಚೆನ್ನಾಗಿ ನೋಡುತ್ತಿದ್ದೇವೆ. ಇಲ್ಲಿ ಹೇಗೆ ನೀವು ಮೇಲಿನಿಂದ (ಛತ್ತಿನ) ನೋಡುವುದಕ್ಕೂ, ಕೆಳಗಿನಿಂದ ನೋಡುವುದಕ್ಕೂ ಅಂತರವಿದೆಯಲ್ಲವೇ? ಇದನ್ನು ಬುದ್ಧಿಯ ಬಲದಿಂದ ಅನುಭವ ಮಾಡಬಹುದು.ಏನು ಅನುಭವವಾಗುತ್ತದೆ? ಅನುಭವ ಹೇಳುವ ಮತ್ತು ಕೇಳುವ ಪದ್ಧತಿ ಪರಂಪರೆಯಿಂದ ಬಂದಿದೆ ಆದ್ದರಿಂದ ಇಂದು ವತನದಲ್ಲಿರುತ್ತ ಏನು ಅನುಭವವಾಗುತ್ತದೆಯೆಂದು ಹೇಳುತ್ತೇವೆ.

ವತನದಲ್ಲಿದ್ದರೂ ಶಿಕ್ಷಕನ ಸಂಬಂಧವಿರುವ ಕಾರಣ ನೋಡುತ್ತೇವೆ, ಕೆಲವರು ಬಹಳ ಅಲೌಕಿಕತೆಯಿಂದ ಅಧ್ಯಯನ ಮಾಡುತ್ತಿದ್ದಾರೆ, ಇನ್ನು ಕೆಲವರು ಸಮಯವನ್ನು ಹಾಳು ಮಾಡುತ್ತಿದ್ದಾರೆ, ಮತ್ತೆ ಕೆಲವರು ಸಮಯವನ್ನು ಸಫಲ ಮಾಡಿಕೊಳ್ಳುತ್ತಿದ್ದಾರೆ. ಸಮಯ ಹಾಳು ಮಾಡಿಕೊಳ್ಳುತ್ತಿರುವುದನ್ನು ನೋಡಿದಾಗ ಏನಾಗುತ್ತದೆ ಗೊತ್ತೇ? ದಯೆ ಬರುತ್ತದೆ ಆದರೆ ಜೊತೆಗೆ ಸಂಬಂಧವೂ ಎಳೆಯುತ್ತದೆ. ತಂದೆಯಿಂದ ಈಗಲೇ ಅನುಮತಿ ಪಡೆದು ಸಾಕಾರ ರೂಪದಿಂದ ಅವರ ಗಮನ ಸೆಳೆಯೋಣವೆಂದನಿಸುತ್ತದೆ. ಆದರೆ ಸಾಕಾರ ರೂಪದ ಪಾತ್ರ ಪೂರ್ಣವಾಯಿತು. ಆದ್ದರಿಂದ ದೂರದಿಂದಲೇ ಸಕಾಶ ಕೊಡುತ್ತೇವೆ. ಸಾಕಾರ ರೂಪದಲ್ಲಿ ಹೇಗೆ ಕೆಂಪು ಬಾವುಟವನ್ನು ತೋರಿಸುತ್ತಿದ್ದರೋ ಹಾಗೆಯೇ ವತನದಲ್ಲಿಯೂ ಸಹ ತೋರಿಸುತ್ತಾರೆ. ಅವ್ಯಕ್ತ ರಸ, ಅವ್ಯಕ್ತ ಸಹಯೋಗ ಬಹಳ ಕಡಿಮೆ ಜನ ತೆಗೆದುಕೊಳ್ಳುತ್ತಿದ್ದಾರೆಂದು ಕಂಡುಬರುತ್ತದೆ.

ಯಾವುದೇ ದಾರಿಯನ್ನು ಆಯ್ದುಕೊಂಡಾಗ ಅಲ್ಲಿ ವಿಘ್ನಗಳು ಬರುತ್ತವೆ. ಅವುಗಳನ್ನು ಪಾರು ಮಾಡಲು ಯಾವ ಶಕ್ತಿ ಮುಖ್ಯವಾಗಿ ಬೇಕು. (ಸಹನಶಕ್ತಿ) ಸಹನಶಕ್ತಿಗಿಂತ ಮೊದಲು ಯಾವ ಶಕ್ತಿ ಬೇಕು? ವಿಘ್ನ ಹಾಕುವಂತಹುದು ಯಾವುದು? ಮೊದಲೇ ಹೇಳಿದಂತೆ ವಿಘ್ನಗಳನ್ನು ಎದುರಿಸಲು ಮೊದಲು ಪರೀಕ್ಷಿಸುವಶಕ್ತಿ ನಂತರ ನಿರ್ಣಯಶಕ್ತಿ ಬೇಕು. ಮಾಯೆಯ ಅಥವಾ ಅಯಥಾರ್ಥ, ಲಾಭ ಅಥವಾ ಹಾನಿ, ಅಲ್ಪಕಾಲದ ಪ್ರಾಪ್ತಿ ಅಥವಾ ಸದಾಕಾಲದ ಪ್ರಾಪ್ತಿ ಎಂಬುದನ್ನು ನಿರ್ಣಯ ಮಾಡಿದಾಗ ಸಹನೆಯಶಕ್ತಿಯನ್ನು ಧಾರಣೆ ಮಾಡಲು ಸಾಧ್ಯವಾಗುತ್ತದೆ. ಮೊದಲು ಪರೀಕ್ಷಿಸುವುದು ಮತ್ತು ನಿರ್ಣಯ ಮಾಡುವುದು. ನಿರ್ಣಯ ಶಕ್ತಿ ಹೆಚ್ಚು ಇದ್ದವರು ಎಂದೂ ಸೋಲುವುದಿಲ್ಲ. ಸೋಲಿನಿಂದ ರಕ್ಷಿಸಿಕೊಳ್ಳಲು ತಮ್ಮ ನಿರ್ಣಯಶಕ್ತಿ ಮತ್ತು ಪರೀಕ್ಷಿಸುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ. ನಿರ್ಣಯ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಯಾವ ಪುರುಷಾರ್ಥವನ್ನು ಮಾಡಬೇಕು? ನೆನಪಿನ ಯಾತ್ರೆಯೆಂದು ತಾವು ಹೇಳುವಿರಿ, ಆದರೆ ನನಪಿನ ಯಾತ್ರೆಗೂ ಬಲವನ್ನು ಕೊಡುವಂತಹ ಜ್ಞಾನ ಅಥವಾ ಅರಿವು ಯಾವುದು? ಅದೂ ಸಹ ಬುದ್ಧಿಯಲ್ಲಿ ಸ್ಪಷ್ಟವಾಗಿರಬೇಕು, ಒಟ್ಟು ಪರಿಣಾಮದಲ್ಲಿ ಅಲ್ಲಲ್ಲಿ ವಿಘ್ನಗಳು ಬರುತ್ತವೆ. ಶಾಲೆಯಲ್ಲಿ ಮಕ್ಕಳು ಪರಸ್ಪರರನ್ನು ನೋಡಿ ಒಟ್ಟು ಮೊತ್ತವನ್ನು ತೆಗೆಯುತ್ತಾರೆ ಆದರೆ ಶಿಕ್ಷಕರು ಕೇಳಿದಾಗ ಗಲಿಬಿಲಿಗೊಳ್ಳುತ್ತಾರೆ, ತಾವು ಒಟ್ಟು ನೆನಪಿನ ಯಾತ್ರೆಯೆಂದು ಹೇಳುತ್ತೀರಿ ಆದರೆ ಆ ಒಟ್ಟು ಯಾವ ರೀತಿಯಿಂದ ಆಗುತ್ತದೆ. ಎಂದೂ ತಿಳಿಯಬೇಕು. ಆದ್ದರಿಂದ ನಿರ್ಣಯ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಮುಖ್ಯವಾಗಿ ಯಾವ ಮಾತಿನ ಆವಶ್ಯಕತೆಯಿದೆ' (ವಿಚಾರ ಸಾಗರ ಮಂಥನ) ವಿಚಾರ ಸಾಗರ ಮಂಥನ ಮಾಡುತ್ತಾ ಸಾಗರದಲ್ಲಿ ಮುಳುಗಿದರೆ? ಕೆಲವರು ವಿಚಾರ ಸಾಗರ ಮಂಥನ ಮಾಡಲು ಕುಳಿತುಕೊಳ್ಳುತ್ತಾರೆ ಆದರೆ ಕೆಲವು ಅಲೆಗಳು ಅವರನ್ನೇ ಎಳೆದುಕೊಂಡು ಹೋಗುತ್ತವೆ. ಹೇಗೆ ಸ್ಥೂಲ ಶರೀರದ ಶಕ್ತಿ ಕಡಿಮೆಯಿದ್ದರೆ ಶಕ್ತಿಯ ಟಾನಿಕ್ ಕೊಡಲಾಗುತ್ತದೆಯೋ ಹಾಗೆಯೇ ನಿರ್ಣಯ ಶಕ್ತಿಯನ್ನು ಹೆಚ್ಚಿಸಲು ಮುಖ್ಯ ಟಾನಿಕ್ ಮೊದಲೇ ಹೇಳಿದಂತೆ ಅಶರೀರಿ, ನಿರಾಕಾರಿ ಮತ್ತು ಕರ್ಮದಲ್ಲಿಅಲಿಪ್ತ, ನಿರಾಕಾರಿ ಅಥವಾ ಅಶರೀರಿ ಸ್ಥಿತಿ ಬುದ್ಧಿಯವರೆಗೆ ಆಯಿತು ಆದರೆ ಇವರು ಕರ್ಮದಿಂದ ಅಲಿಪ್ತರು ಮತ್ತು ವಿಶೇಷವಾಗಿರುವರೆಂದು, ಲೌಕಿಕವಲ್ಲ ಅಲೌಕಿಕವಾಗಿದ್ದಾರೆಂದು ನೋಡಿದವರು ಹೇಳಬೇಕು. ನಿರ್ಣಯಶಕ್ತಿಯನ್ನು ವೃದ್ಧಿಸಲು ಇದರ ಅವಶ್ಯಕತೆಯಿದೆ. ಎಷ್ಟು ಈ ಮಾತುಗಳ ಧಾರಣೆಯಾಗುತ್ತದೆಯೋ ಅಷ್ಟೆ ವಿಘ್ನಗಳನ್ನು ದೂರಮಾಡುವಿರಿ ಮತ್ತು ಸೃಷ್ಟಿಯ ಮೇಲೆ ಬರುವ ವಿಘ್ನಗಳಿಂದ ರಕ್ಷಣೆ ಮಾಡಿಕೊಳ್ಳುವಿರಿ. ಶಿಕ್ಷಣ ಸಾಕಷ್ಟು ಸಿಗುತ್ತದೆ ಆದರೆ ಈಗ ಮಾಡಬೇಕಾದದ್ದೇನು? ಶಿಕ್ಷಣಾಸ್ವರೂಪರಾಗಬೇಕು. ಶಿಕ್ಷಣ ಹಾಗೂ ತಮ್ಮ ಸ್ವಧರ್ಮ ಬೇರೆಯಾಗಬಾರದು. ತಮ್ಮ ಸ್ವರೂಪವೇ ಶಿಕ್ಷಣವಾಗಬೇಕು. ಅನೇಕ ಮಾತುಗಳಲ್ಲಿ ವಾಣಿಯಿಂದ ಶಿಕ್ಷಣ ಕೊಡಲಾಗುವುದಿಲ್ಲ, ಆದರೆ ತಮ್ಮ ಸ್ವರೂಪದಿಂದ ಶಿಕ್ಷಣ ಕೊಡಲಾಗುತ್ತದೆ. ಆದ್ದರಿಂದ ಈಗ ಶಿಕ್ಷಣ ಸ್ವರೂಪರಾಗಿ ತಮ್ಮ ಸ್ವರೂಪದಿಂದ ಶಿಕ್ಷಣವನ್ನು ಕೊಡಬೇಕು, ಶಿಕ್ಷಣವಂತೂ ಸಾಕಷ್ಟು ಸಿಕ್ಕಿದೆ. ಕೋರ್ಸ್ ಪೂರ್ಣವಾಯಿತಲ್ಲವೇ?

ಬಾಪ್ ದಾದಾ ಈಗ ಬೇರೆ ತನುವಿನಲ್ಲಿ ಬರುತ್ತಾರೆ. ಆದರೆ, ಸಾಕಾರ ರೂಪದಲ್ಲಿ ಮುರಳಿ ನುಡಿಸಿದಂತೆ ಏಕೆ ನುಡಿಸುವುದಿಲ್ಲ? ಅದೇ ರೀತಿ ಮುರಳಿ ನುಡಿಸಲಾಗುವುದಿಲ್ಲವೇ? ಏಕೆ ಭಾಷೆ ಬದಲಾಯಿತು, ಏಕೆ ವಿಧಿ ಬದಲಾಯಿತೆಂಬ ಪ್ರಶ್ನೆಗಳು ಅನೇಕರಲ್ಲಿವೆ. ಹೇಗೆ ನೀವು ಭಾಷಣ ಮಾಡಬಲ್ಲಿರೋ ಹಾಗೆಯೇ ಬಾಪ್ ದಾದಾರವರು ಯಾವುದೋ ತನುವಿನ ಮುಖಾಂತರ

ಮುರಳಿಯನ್ನು ನುಡಿಸುವುದು ಕಷ್ಟವೇ? ಆದರೆ ಏಕೆ ನುಡಿಸುವುದಿಲ್ಲ? (ನಾಲ್ಕಾರು ಜನ ತಮ್ಮ ವಿಚಾರವನ್ನು ತಿಳಿಸಿದರು) ಯಾವ ತನುವಿನಿಂದ ಓದಿಸುವ ಪಾತ್ರವಿತ್ತೋ ಆ ***ಶಿಕ್ಷಣದ ಪಾತ್ರ ಪೂರ್ಣವಾಯಿತು, ಆದರೆ ಈಗ ಓದಿಸಲು ಬರುವುದಿಲ್ಲ. ಅದು ಕೋರ್ಸ್ , ಅದೇ ತನುವಿನಿಂದ ಪಾತ್ರವನ್ನು ಪೂರ್ಣ ಮಾಡಲಾಯಿತು. ಈಗ ಭೇಟಿಯಾಗಲು, ಮನೋರಂಜನೆ ಮಾಡಲು ಬರುತ್ತಾರೆ. ಇನ್ನೂ ಮುಖ್ಯ ಮಾತೇನಾಗಿದೆ? ಅಶರೀರಿ, ಕರ್ಮಾತೀತರಾಗಿ ಏನು ಮಾಡಿದರು? ಒಂದು ಕ್ಷಣದಲ್ಲಿ ಪಕ್ಷಿಯಾಗಿ ಹಾರಿದರು. ಸಾಕಾರ ಶರೀರದಿಂದ ಒಂದೇ ಕ್ಷಣದಲ್ಲಿ ಹಾರಿದರಲ್ಲವೇ? ಆದ್ದರಿಂದ ಈಗ ಶಿಕ್ಷಣ ಪೂರ್ಣವಾಯಿತು. ಇನ್ನು ಜೊತೆಗೆ ಕರೆದುಕೊಂಡು ಹೋಗುವ ಕಾರ್ಯವೊಂದು ಉಳಿದಿದೆ. ಆದ್ದರಿಂದ ಈಗ ಕೇವಲ ಮಿಲನ ಮಾಡಲು ಅವ್ಯಕ್ತ ಶಿಕ್ಷಣದಿಂದ ಮನೋರಂಜನೆ ಮಾಡಿಸಲು ಮತ್ತು ಹಾರಿಸಲು ಬರುತ್ತಾರೆ. ಶಿಕ್ಷಣದ ವಿಚಾರಗಳು, ಶಿಕ್ಷಣದ ರೂಪ. ಈಗ ನಡೆಯುವುದಿಲ್ಲ. ಈಗ ಕೋರ್ಸ್ (revise) ಮನರಾವರ್ತನೆಯಾಗುತ್ತಿದೆ, ಆದರೆ ಎಷ್ಟು ಸಮಯದಲ್ಲಿ ಪುನರಾವರ್ತನೆ ಮಾಡುವಿರಿ? ಎಲ್ಲಿಯವರೆಗೆ ಕೋರ್ಸ್ ಪೂರ್ಣವಾಗುವುದು? ಎಲ್ಲಿಯವರೆಗೆ ಪುನರಾವರ್ತನೆಯ ಕೋರ್ಸ್ ಆಗಿದೆ ಎಂಬುದುನ್ನು ಎಲ್ಲರೂ ನಿರ್ಣಯಿಸಬೆಕು.ಸಾಕಾರ ತನುವಿನ ಪ್ರತಿಯೊಂದು ಕರ್ಮ, ಪ್ರತಿಯೊಂದು ಸ್ಥಿತಿಯ ಜೊತೆಗೆ ತಮ್ಮ ತುಲನೆ ಮಾಡಿಕೊಂಡರೆ ತಿಳಿಯುವುದು, ತಮ್ಮನ್ನು ತಾವೇ ಪರೀಕ್ಷಿಸಿಕೊಳ್ಳುವ ಗುರಿಯನ್ನು ಕೊಟ್ಟಾಯಿತು, ನಂತರ ಉತ್ತರಿಸಿ**.

ನಿಮ್ಮ ಹೋಂವರ್ಕ್ ನಡೆಯುತ್ತಿದೆ ಇದರಲ್ಲಿಯೂ ವಿಶೇಷವಾಗಿ ಗಮನವನ್ನು ಸೆಳೆಯುತ್ತಿದ್ದಾರೆ. ನಿಗದಿಸಲ್ಪಟ್ಟಂತೆ ಯಾವ ಪಾತ್ರವಿತ್ತೋ ಆ ಸಾಕಾರ ರೂಪವನ್ನು ಅವ್ಯಕ್ತವೇಕೆ ಮಾಡಲಾಯಿತು? ಇದು ಎರಡನೆಯ ಪ್ರಶ್ನೆಯಾಗಿದೆ. ಇದಕ್ಕೂ ಅನೇಕ ಗೂಢ ರಹಸ್ಯಗಳಿವೆ. ಇದರ ಆಳಕ್ಕೆ ಹೋಗಿ, ಸಾಗರದ ಅಲೆಗಳಲ್ಲಿ ಸ್ನಾನ ಮಾಡಬೇಡಿ ಆದರೆ ಸಾಗರದ ಆಳಕ್ಕೆಹೋಗಿ ಅಲ್ಲಿರುವ ರತ್ನಗಳನ್ನು ತನ್ನಿ, ನಾಟಕದಲ್ಲಿ ಯಾವ ರಹಸ್ಯವಡಗಿದೆಯೆಂದು ಯೋಚಿಸಿ. ರಹಸ್ಯವಿಲ್ಲದೆಯೇ ಯಾವುದೇ ವ್ಯವಹಾರವಾಗಲು ಸಾಧ್ಯವೇ ಇಲ್ಲ. ಒಳ್ಳೆಯದು – ಸಮಯವಾಯಿತು.

ಅವ್ಯಕ್ತ ಮುರಳಿ 26-06-1969.

***ತಮ್ಮಸ್ವರೂಪದಿಂದ ಶಿಕ್ಷಣ ಕೊಡುವುದೇ ಶಿಕ್ಷಣ ಕೊಡುವ ಸ್ವರೂಪ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ-ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಶಿವಪರಮಾತ್ಮನನ್ನು ತಂದೆ, ಟೀಚರ್, ಸದ್ಗುರು ಮೂರು ಸಂಬಂಧಗಳೊಂದಿಗೆ, ಮೂರು ರೂಪಗಳಲ್ಲಿ ಸ್ಮೃತಿ ಮಾಡುತ್ತಿದ್ದೇನೆ.

2. ನಾನು ಶಿಕ್ಷಕನಾದ ಶಿವತಂದೆಯ ದೃಷ್ಟಿಯಲ್ಲಿ ನಂಬರ್ ಒನ್ ವಿದ್ಯಾರ್ಥಿ.

3. ಸದ್ಗುರು ರೂಪದಿಂದ ಶಿವತಂದೆ ಕೊಡುತ್ತಿರುವ ಸ್ಮೃತಿಯಾತ್ರೆಯ ಶಿಕ್ಷಣದಿಂದ ನಾನು ಅಶರೀರಿ, ನಿರಾಕಾರಿ ಮತ್ತು ಅತೀತವಾಗಿ ತಯಾರಾಗಿದ್ದೇನೆ.

4. ನಾನು ಶಿಕ್ಷಕರಾದ ಶಿವ ತಂದೆಯಿಂದ ಓದಿನಲ್ಲಿ ಸಹಾಯವನ್ನು ತೆಗೆದುಕೊಳ್ಳುತ್ತಿದ್ದೇನೆ.

5. ಸದ್ಗುರುವಾದ ಶಿವ ತಂದೆಯಿಂದ ಶಿಕ್ಷಣ ತೆಗೆದುಕೊಂಡು ಮುಕ್ತಿ, ಜೀವನ್ ಮುಕ್ತಿಯನ್ನು ಹೊಂದಿದ್ದೇನೆ.

6. ಸದ್ಗುರು ರೂಪದಲ್ಲಿ ಶಿವ ತಂದೆ ಕೊಡುತ್ತಿರುವ ರಿವೈಸ್ ಕೋರ್ಸ್(ಅವ್ಯಕ್ತ ಮುರಳಿ)ಅನ್ನು ಉತ್ಸಾಹ ಉಲ್ಲಾಸಗಳಿಂದ ಪೂರ್ತಿ ಮಾಡಿದ್ದೇನೆ.

7. ನಾನು ರಿವೈಸ್ ಕೋರ್ಸ್ ಮಾಡಿ ಸಮಯವನ್ನು ಸಫಲ ಮಾಡಿಕೊಂಡಿದ್ದೇನೆ.

8. ನಾನು ವಿಘ್ನಗಳೆಲ್ಲವನ್ನು ಪರಿಶೀಲಿಸಿ ನಿರ್ಣಯವನ್ನು ತೆಗೆದುಕೊಳ್ಳುವ ಸಹನ ಶಕ್ತಿ ಸ್ವರೂಪ.

9. ನಾನು ನನ್ನ ಪರಿಶೀಲನಾ ಶಕ್ತಿ (ಪರೀಕ್ಷಿಸುವ ಶಕ್ತಿ) ಮತ್ತು ನಿರ್ಣಯ ಶಕ್ತಿಯನ್ನು ವೃದ್ಧಿ ಮಾಡಿಕೊಂಡು ಸೋಲಿನಿಂದ ನನ್ನನ್ನು ನಾನು ರಕ್ಷಿಸಿ ಕೊಂಡಿದ್ದೇನೆ.

10. ನಾನು ವಿಚಾರ ಸಾಗರ ಮಂಥನ ಮಾಡಿ ನನ್ನ ನಿರ್ಣಯ ಶಕ್ತಿಯನ್ನು ವೃದ್ಧಿ ಮಾಡಿಕೊಂಡಿದ್ದೇನೆ.

11. ನಾನು ನನ್ನ ಸ್ವರೂಪದಿಂದ ಶಿಕ್ಷಣವನ್ನು ಕೊಡುವ ಶಿಕ್ಷಣ ಸ್ವರೂಪ.

12. ನಾನು ಬ್ರಹ್ಮಾ ತಂದೆಯ ಪ್ರತಿಯೊಂದು ಕರ್ಮ, ಪ್ರತಿಯೊಂದು ಸ್ಥಿತಿಯಲ್ಲಿ ನನ್ನನ್ನು ನಾನು ಹೋಲಿಸಿಕೊಳ್ಳುತ್ತಾ ಅವರನ್ನು ನೋಡುತ್ತಾ ಲಕ್ಷ್ಯ ವನ್ನು ಇಟ್ಟುಕೊಂಡು ಎಲ್ಲಿಯವರೆಗೆ ಸೇರಿದ್ದೇನೆ ಎಂದು ತಿಳಿದುಕೊಂಡಿದ್ದೇನೆ.

13. ನಾನು ಸಾಗರನ ಅಲೆಗಳಲ್ಲಿ ಸ್ನಾನ ಮಾಡುವುದಷ್ಟೆ ಅಲ್ಲ ಜ್ಞಾನ ಸಾಗರದ ಆಳದಲ್ಲಿ ಹೋಗಿ ಜ್ಞಾನ ರತ್ನಗಳನ್ನು ತಂದಿದ್ದೇನೆ.